**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 02.07.2021.

**1] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 180/2021 ಕಲಂ: ಮಹಿಳೆ ಕಾಣೆ.**

ದಿನಾಂಕ 29.06.2021 ರಂದು 07.00 ಗಂಟೆಯ ನಡುವೆ ಇದರಲ್ಲಿಯ ಕಾಣೆಯಾದ ಸೀಮಾ ತಂ ಶಿವಪ್ಪ ಹುನ್ನೂರ ವಯಾ 21 ವರ್ಷ ಸಾ॥ ಶೂರ್ಪಾಲಿ ತಾ॥ ಜಮಖಂಡಿ ಇವಳು ಪಿರ್ಯಾದಿಯ ತವರು ಮನೆಯಾದ ಕನ್ನೂರ ಗ್ರಾಮದ ತೋಟದ ಮನೆಯಿಂದ ಮನೆಯಲ್ಲಿ ಎಲ್ಲರೂ ಮಲಗಿದಾಗ ಮನೆಯಲ್ಲಿ ಯಾರಿಗೂ ಹೇಳದೆ ಕೇಳದೆ ಎಲ್ಲಿಗೋ ಹೋಗಿ ಕಾಣೆ ಆಗಿದ್ದು ಇರುತ್ತದೆ. ಈ ಬಗ್ಗೆ ಕಲಾವತಿ ಗಂ ಶಿವಪ್ಪ ಹುನ್ನುರ ಸಾ॥ ಶೂರ್ಪಾಲಿ ತಾ॥ ಜಮಖಂಡಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 01.07.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಆಲಮೇಲ ಪೊಲೀಸ ಠಾಣೆ ಗುನ್ನಾ. ನಂ: 79/2021 ಕಲಂ: 78 [3]ಕೆ.ಪಿ ಆಕ್ಟ್**

ದಿನಾಂಕ 29.06.2021 ರಂದು 16.00 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ 1] ನಿಂಗಣ್ಣ ಬಸಣ್ಣ ಬಿರಾದಾರ ಸಾ: ಸೋಮಜಾಳ, ತಾ: ಸಿಂದಗಿ, ಜಿ: ವಿಜಯಪುರ ಈತನು ತನ್ನ ಪಾಯಿದೇಗೊಸ್ಕರ ಒಂದು ರೂಪಾಯಿಗೆ 80 ರೂ ಕೊಡುವ ಕರಾರಿನ ಮೇಲೆ ಸೋಮಜಾಳ ಗ್ರಾಮದಲ್ಲಿರುವ ದಾವಲಮಲಿಕ ದರ್ಗಾದ ಮುಂದೆ ಇರುವ ಖುಲ್ಲಾ ಸಾರ್ವಜನಿಕ ಸ್ಥಳದಲ್ಲಿ ನಿಂತು ಸಾರ್ವಜನಿಕರಿಂದ ಹಣ ಪಡೆದಕೊಂಡು ಕಲ್ಯಾಣ ಅಂಬುವ ಓಸಿ ಮಟಕಾ ಜೂಜಾಟದ ನಂಬರುಗಳನ್ನು ಬರೆದುಕೊಳ್ಳುತ್ತಿದ್ದಾಗ ಓ.ಸಿ ನಂಬರುಗಳು ಬರೆದ ಒಂದು ಚೀಟಿ, ನೀಲಿ ಬಾಲಪೆನ್ನ ಒಂದು, ಮತ್ತು ಒಟ್ಟು ರೋಖ ಹಣ: 740/-ರೂ ಗಳು ಸಮೇತ ಸಿಕ್ಕಿದ್ದು ಇರುತ್ತದೆ. ಈ ಬಗ್ಗೆ ಸ:ತ: ಸುರೇಶ ಆರ್.ಗಡ್ಡಿ ಪಿಎಸ್ಐ ಆಲಮೇಲ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 01.07,2021 ರಂದು ಆಲಮೇಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಕಲಕೇರಿ ಪೊಲೀಸ ಠಾಣೆ ಗುನ್ನಾ. ನಂ: 84/2021 ಕಲಂ: 188 ಐ.ಪಿ.ಸಿ ಮತ್ತು 15(ಎ) 32(3) ಕೆ ಇ ಆಕ್ಟ್**

ದಿನಾಂಕ 01.07.2021 ರಂದು 17:40 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ ಅಬ್ದುಲ ಖಾಸೀಮಸಾಬ ಜೀವಣಗಿ ಸಾ॥ ಗೊಲಗೇರಿ ಈತನು ಕರ್ನಾಟಕ ಸರ್ಕಾರ ವಿಧಿಸಿರುವ ಕರೋನಾ ಲಾಕಡೌನ ಆದೇಶವನ್ನು ಉಲ್ಲಂಘಿಸಿ, ಯಾವುದೆ ಲೈಸನ್ಸ ವ ಪರವಾನಗಿ ಇಲ್ಲದೆ ತನ್ನ ದಾಬಾದ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಸರಾಯಿ ಕುಡಿಯಲು ಸ್ಥಳಾವಕಾಶ ಮಾಡಿಕೊಡುತ್ತಿರುತ್ತಾನೆ ಈ ಬಗ್ಗೆ ಜಿ ಜಿ ಬಿರಾದಾರ ಮ.ಪಿ.ಎಸ್.ಐ ಕಲಕೇರಿ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 01.07,2021 ರಂದು ಕಲಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.